ಎಂಬಂತೆ ಮನೆ ಎದುರೇ ಸ್ಕೂಟರ್ ಅಪಘಾತದಲ್ಲಿ ಬಲಗಾಲಿನ ಶಕ್ತಿಯನ್ನೂ ಕಳೆದುಕೊಳ್ಳಬೇಕಾಯಿತು. ಕರಾಟೆ ಪಟುವಾಗಬೇಕೆಂಬ ಅವರ ಕನಸು ನುಚ್ಚುನೂರಾಯಿತು. ಎರಡೂ ಕಾಲುಗಳು ಅಶಕ್ತವಾದರೂ ಸಾಧನೆಯ ಛಲ ಮಾತ್ರ ಕಡಿಮೆಯಾಗಲಿಲ್ಲ. ದೈಹಿಕವಾಗಿ ಅಲ್ಲ; ಮಾನಸಿಕವಾಗಿ ತನ್ನೆಲ್ಲ ಬಲ ಬಳಸಿ ಏನನ್ನಾದರೂ ಸಾಧಿಸಬೇಕೆಂಬ ಛಲ ಮತ್ತಷ್ಟು ಗಟ್ಟಿಗೊಳ್ಳುತ್ತಲೇ ಹೋಯಿತು.

ಶೂಟರ್ ಆಗಬಹುದೆಂದು ಜ್ಯೋತಿ ಅವರಿಗೆ ಮಾರ್ಗದರ್ಶನ ನೀಡಿದವರು ಶಿರಸ್ತೇದಾರ್ ಮಹೇಶ ಅಂಗಡಿ. ಅವರ ಮಾರ್ಗದರ್ಶನದಲ್ಲಿ, 2017ರಲ್ಲಿ ಹುಬ್ಬಳ್ಳಿಯ 'ಎಚ್‌ಎಸ್‌ಎಸ್‌ಎ' ಅಕಾಡೆಮಿಗೆ ಸೇರಿಕೊಂಡರು. ತರಬೇತಿ ಆರಂಭಿಸಿದ ಮೂರೇ ತಿಂಗಳಲ್ಲಿ ಮೊದಲ ಸ್ಪರ್ಧೆಯನ್ನು ಬೆಂಗಳೂರಿನಲ್ಲಿ ಎದುರಿಸಿದರು. ಕರ್ನಾಟಕ ರಾಜ್ಯ ರೈಫಲ್ ಅಸೋಶಿಯೇಷನ್ (ಕೆಎಸ್‌ಆರ್‌ಎ) ವತಿಯಿಂದ ನಡೆದ ಶೂಟಿಂಗ್ ಸ್ಪರ್ಧೆಯಲ್ಲಿ ಜ್ಯೋತಿ ಒಬ್ಬರೇ ಲೇಡಿ ಶೂಟರ್ ಆಗಿದ್ದರು. ಅಲ್ಲಿ ತನ್ನ ಕನಸಿನ ಜರ್ನಿಯ ಮೊದಲ ಬಂಗಾರ ಗೆದ್ದುಕೊಂಡರು. ಅಲ್ಲಿಂದ ಆರಂಭವಾದ ಬಂಗಾರದ ಬೇಟೆ ನಿರಂತರವಾಯಿತು. ದೇಶದ ಬೇರೆ ಬೇರೆ ಕಡೆಗಳಲ್ಲಿ ಈವರೆಗೆ 16 ಶೂಟಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಂಡು ಬಂದಿರುವ ಜ್ಯೋತಿ, ಹೋದಲೆಲ್ಲ ಬಂಗಾರವನ್ನೇ ಗೆದ್ದು 'ಗೋಲ್ಡನ್ ಗರ್ಲ್' ಆಗಿ ಹೊಮ್ಮಿದ್ದಾರೆ.



ಕೋಚ್ ರವಿಚಂದ್ರ ಅವರೊಂದಿಗೆ ಇಂಟರ್‌ನ್ಯಾಷನಲ್ ಆನ್‌ಲೈನ್ ಶೂಟಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಂಡ ಪ್ಯಾರಾಶೂಟರ್ ಜ್ಯೋತಿ ಸಣ್ಣಕ್ಕಿ ಜೊತೆ ಕೋಚ್ ರವಿಚಂದ್ರ ಬಾಳೆಹೊಸೂರ ಇದ್ದಾರೆ

## ಸಾಧನೆ ಹಿಂದಿನ ನೋವು

ಜ್ಯೋತಿ ಸಣ್ಣಕ್ಕಿಯ ಸಾಧನೆ ಹಿಂದೆ ಅವರ ಅಮ್ಮ ಕಲಾವತಿ, ಅಪ್ಪ ಹನುಮಂತಪ್ಪ, ತಮ್ಮ, ಕೋಚ್ ರವಿಚಂದ್ರ ಬಾಳೆಹೊಸೂರ, ಅವರ ಸ್ನೇಹಿತರು, ಹಿತೈಷಿಗಳ ಶ್ರಮವೂ ಇದೆ. ಜ್ಯೋತಿ ಪ್ಯಾರಾಶೂಟರ್ ಆಗಿರುವುದರಿಂದ ಅವರಿಗೆ ಎಲೆಕ್ಟ್ರಾನಿಕ್ ಗನ್ ಜೊತೆಗೆ ವಿಶೇಷ ವ್ಹೀಲ್‌ಚೇರ್ ಅಗತ್ಯವಿದೆ. ಅವರಿಗೆ ನಿಂತು ಶೂಟ್ ಮಾಡಲಾಗದ ಕಾರಣಕ್ಕೆ ವ್ಹೀಲ್‌ಚೇರ್ ಮೇಲೆ ಕುಳಿತು, ಕೈಗೆ ಸಪೋರ್ಟ್ ಪಡೆದು ಶೂಟ್ ಮಾಡಬೇಕು. ಎಲೆಕ್ಟ್ರಾನಿಕ್ ಗನ್‌ಗೆ ₹ 3 ಲಕ್ಷ, ವೀಲ್‌ಚೇರ್‌ಗೆ ₹2 ಲಕ್ಷದ ಅಗತ್ಯವಿದೆ. ಶೂಟಿಂಗ್ ಕೋಚಿಂಗ್‌ಗೆ ಪ್ರತಿ ತಿಂಗಳು ₹ 1ಲಕ್ಷ ಶುಲ್ಕ ಭರಿಸಬೇಕಿದೆ. ಪ್ರತಿನಿತ್ಯ ಕನಿಷ್ಠ 9 ತಾಸು ಕಾಲ ಪ್ರಾಕ್ಟಿಸ್ ಮಾಡಬೇಕಿದೆ. ಜ್ಯೋತಿ ಅವರು ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿವೀಕ್ಷಕರು. ಹಾಗಾಗಿ ಬೆಳಿಗ್ಗೆ 6ರಿಂದ 9ರವರೆಗೆ ಪ್ರಾಕ್ಟಿಸ್ ಮಾಡಿ, ಸರಿಯಾಗಿ 10ಕ್ಕೆ ಕೆಲಸಕ್ಕೆ ಹಾಜರಾಗುತ್ತಾರೆ. ಆರಂಭದಲ್ಲಿ ಅಗತ್ಯ ಗನ್ ಖರೀದಿಗೆ ಅವರ ಅಮ್ಮ ತನ್ನ ಚಿನ್ನದ ಬಳೆಗಳನ್ನು ಮಾರಾಟ ಮಾಡಿ ಗನ್ ಖರೀದಿಸಿಕೊಟ್ಟಿದ್ದರು. ಜ್ಯೋತಿ ಅವರ ಸಾಧನೆ ಪರಿಗಣಿಸಿ, ₹2 ಲಕ್ಷ ಮೊತ್ತದ ಗನ್ ಶೇ 40ರಷ್ಟು ವಿಶೇಷ ರಿಯಾಯಿತಿಯಲ್ಲಿ ಲಭ್ಯವಾಯಿತು.

ಈವರೆಗೆ ರಾಜ್ಯ ಹಾಗೂ ರಾಷ್ಟ್ರೀಯ 17 ಸ್ಪರ್ಧೆಗಳಲ್ಲಿ ಪಾಲ್ಗೊಂಡರೂ ಜ್ಯೋತಿ ಒಂದೇ ಒಂದು ಬಾರಿ ವಿಮಾನ ಏರಿ ಹೋಗಿಲ್ಲ. ಆರ್ಥಿಕ ಸಮಸ್ಯೆಯಿಂದ ದೆಹಲಿಯವರೆಗೂ ರೈಲಿನಲ್ಲೇ ಪಯಣಿಸಿದ್ದಾರೆ. ಅವರ ಸಹೋದರ ಪ್ರಯಾಣದ ಸಂದರ್ಭದಲ್ಲಿ ಜೊತೆಗಿರುತ್ತಾರೆ. 'ನಮ್ಮಂತಹವರಿಗೆ ಒಂದಷ್ಟು ಪ್ರೋತ್ಸಾಹ ಸಿಕ್ಕರೆ ಹೆಚ್ಚಿನ ಸಾಧನೆ ಮಾಡಲು ಸಾಧ್ಯವಾಗಲಿದೆ' ಎನ್ನುತ್ತಾರೆ ಜ್ಯೋತಿ. ಊರುಗೋಲು ಇಲ್ಲದೆ ಅವರು ನಡೆಯುವಂತಿಲ್ಲ. ಜೀವನದಲ್ಲಿ ಒಳ್ಳೆಯ ಶೂಟರ್ ಆಗಲೇಬೇಕೆಂಬ ಗುರಿಗೆ ಗುರಿಯಿಟ್ಟಿರುವ ಜ್ಯೋತಿ ತನ್ನೊಳಗಿನ ನ್ಯೂನತೆಯನ್ನು ಬದಿಗೊತ್ತಿ, ಸಾಧನೆಯ ಬೆನ್ನು ಹತ್ತಿದ್ದಾರೆ.

ಬರೋಬ್ಬರಿ 6 ಕೆ.ಜಿ. ತೂಕದ ಗನ್ ಹಿಡಿದು, ಬಿಂದಿ ಗಾತ್ರದ ಪಾಯಿಂಟ್‌ಗೆ ಗುರಿಯಿಟ್ಟು ಹೊಡೆಯುವುದು ಅಂದರೆ ಜ್ಯೋತಿಗೀಗ ಸುಲಲಿತ. ನಾವು ಎಷ್ಟು ಪ್ರಾಕ್ಟೀಸ್ ಮಾಡುತ್ತೇವೆಯೋ ಅಷ್ಟೂ ಶಾರ್ಪ್ ಶೂಟರ್ ಆಗಬಹುದು ಎನ್ನುವ ಅವರು, ಕೊರೊನಾ ಲಾಕ್‌ಡೌನ್ ಸಮಯದಲ್ಲಿ ಅಭ್ಯಾಸದಿಂದ ವಂಚಿತರಾಗಬೇಕಾಯಿತು. ಆದರೂ ಮನೆಯಲ್ಲೇ ತಮ್ಮ ಊರುಗೋಲುಗಳನ್ನು ಬಳಸಿಕೊಂಡು, ವ್ಹೀಲ್‌ಚೇರ್‌ಗೆ ಒಂದಷ್ಟು ಆಲ್ಟರೇಷನ್ ಮಾಡಿಸಿಕೊಂಡು ಪ್ರಾಕ್ಟೀಸ್ ಮಾಡಿದರು.

ಜ್ಯೋತಿ ಅವರ ಇಷ್ಟೆಲ್ಲ ಸಾಧನೆ, ಸ್ಕೋರ್‌ಗಳೇ ಜಗತ್ತಿನ ಮೊದಲ ಆನ್‌ಲೈನ್ ಶೂಟಿಂಗ್ ಅವಕಾಶವನ್ನು ಅವರಿಗೆ ಕಲ್ಪಿಸಿವೆ. ಜ್ಯೋತಿ ಮೇಲೆ ಭರವಸೆಯಿಟ್ಟು ಅವಕಾಶ ನೀಡಿದ ದೀಪಾ ಮಲಿಕ್, 'ಜ್ಯೋತಿ, ನೀವು ಇಂಡಿಯನ್ ಲೇಡಿ ಟೈಗರ್' ಆಗಬೇಕು ಎಂದು ಟ್ವೀಟ್ ಮಾಡಿದ್ದಾರೆ. ಈ ಟ್ವೀಟ್ ಜ್ಯೋತಿ ಅವರಿಗೆ ಮತ್ತಷ್ಟು ಹುರುಪು ನೀಡಿದೆ.

ಬೆಸ್ಟ್ ಆಫ್ ಲಕ್ ಜ್ಯೋತಿ ಸಣ್ಣಕ್ಕಿ.

ಪ್ರತಿಕ್ರಿಯಿಸಿ: feedback@sudha.co.in

## ಗುರಿಗೆ ಸಂದ ಗೌರವಗಳು

- ರಾಜ್ಯ ರೈಫಲ್ ಅಸೋಶಿಯೇಷನ್ ಶೂಟಿಂಗ್ ಚಾಂಪಿಯನ್‌ಶಿಫ್ ಬೆಂಗಳೂರು, ಚಿನ್ನದ ಪದಕ
- ಸೌಥ್ ಝೋನ್ ಶೂಟಿಂಗ್ ಚೆನ್ನೈ, ಚಿನ್ನದ ಪದಕ
- ಆಲ್ ಇಂಡಿಯನ್ ಶೂಟಿಂಗ್ ಚಾಂಪಿಯನ್‌ಶಿಫ್ ಗೋವಾ, ಚಿನ್ನದ ಪದಕ
- ಜೆ.ವಿ. ಮೌಲಾಂಕರ್ (ಫ್ರೀ ನ್ಯಾಶನಲ್) ಪ್ಯಾರಾ ಶೂಟಿಂಗ್ ಚಾಂಪಿಯನ್ ಶಿಫ್ ನವದೆಹಲಿ, ಚಿನ್ನದ ಪದಕ
- 61ನೇ ನ್ಯಾಷನಲ್ ಆಲ್ ಇಂಡಿಯಾ ಶೂಟಿಂಗ್ ಚಾಂಪಿಯನ್‌ಶಿಫ್; (ಕೇರಳ) – ಇಂಡಿಯನ್ ರೆನೋಲ್ಡ್ ಶೂಟರ್ ಆಗಿ ಆಯ್ಕೆ
- ಎಚ್‌ಎಸ್‌ಎಸ್‌ಎ ನ್ಯಾಶನಲ್ ಶೂಟಿಂಗ್ ಚಾಂಪಿಯನ್ ಶಿಫ್; ಹುಬ್ಬಳ್ಳಿ – ಬೆಳ್ಳಿ ಪದಕ (ದ್ವಿತೀಯ)
- ರಾಜ್ಯ ರೈಫಲ್ ಅಸೋಶಿಯೇಷನ್ ಶೂಟಿಂಗ್‌ಚಾಂಪಿಯನ್ ಶಿಫ್ ಬೆಂಗಳೂರು, ಚಿನ್ನದ ಪದಕ
- ಜೆ.ವಿ.ಮೌಲಾಂಕರ್ ಸೌಥ್ ಝೋನ್ ಶೂಟಿಂಗ್ ನ್ಯಾಶನಲ್ ಚಾಂಪಿಯನ್‌ಶಿಫ್ ಚೆನ್ನೈ, ಚಿನ್ನದ ಪದಕ
- ಸಿಎಂ ಕಪ್–2018, ದಸರಾ ಕ್ರೀಡಾಕೂಟ ಮೈಸೂರು/ಬೆಂಗಳೂರು, ಚಿನ್ನದ ಪದಕ
- ಎಚ್‌ಡಿಎಂಸಿ –2018 ಮೇಯರ್ ಕಫ್ ಶೂಟಿಂಗ್ ಚಾಂಪಿಯನ್‌ಶಿಫ್ ಹುಬ್ಬಳ್ಳಿ, ಚಿನ್ನದ ಪದಕ
- 62ನೇ ಆಲ್ ಇಂಡಿಯಾ ಶೂಟಿಂಗ್ ಚಾಂಪಿಯನ್‌ಶಿಫ್; (ಕೇರಳ), ಬೆಳ್ಳಿ ಪದಕ
- ರಾಜ್ಯ ರೈಫಲ್ ಅಸೋಸಿಯೇಶನ್ ಶೂಟುಂಗ್ ಚಾಂಪಿಯನ್‌ಶಿಫ್ ಬೆಂಗಳೂರು, ಚಿನ್ನದ ಪದಕ
- 63ನೇ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್ ಶಿಫ್; ಮಧ್ಯಪ್ರದೇಶ, –ಬೆಳ್ಳಿ ಪದಕ
- 30ನೇ ರಾಜ್ಯ ಮಟ್ಟದ ಪ್ಯಾರಾಲಿಂಪಿಕ್ ಶೂಟಿಂಗ್ ಚಾಂಪಿಯನ್‌ಶಿಫ್; ಮೈಸೂರು (Pron1), ಚಿನ್ನದ ಪದಕ